# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2321 |
| ಸದಸ್ಯರ ಹೆಸರು | : | ಶ್ರೀಮತಿ ಬಲ್ಕೀಸ್ ಬಾನು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 27/03/2026 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ 6 ವರ್ಷದೊಳಗಿನ ಅಸಹಜ ಬೆಳವಣಿಗೆ (ಕುಬ್ಜತೆ) ಸಮಸ್ಯೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದ ಅಂಗನವಾಡಿ ಕೇಂದ್ರಗಳಲ್ಲಿ ಗುರುತಿಸಲಾದ ಒಟ್ಟು ಕುಬ್ಜತೆ ಇರುವ ಮಕ್ಕಳ ಸಂಖ್ಯೆ 4,25,827. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-01**ರಲ್ಲಿ ಒದಗಿಸಿದೆ. |
| ಆ) | ಮಕ್ಕಳಲ್ಲಿ ಅಸಹಜ ಬೆಳವಣಿಗೆ (ಕುಬ್ಜತೆ) ಬರಲು ಕಾರಣವೇನು; ಇದನ್ನು ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಮಕ್ಕಳ ಕುಬ್ಜತೆಗೆ ಮತ್ತು ಅಪೌಷ್ಠಿಕತೆಗೆ ಕಾರಣಗಳು:<br>*ಸಾಮಾಜಿಕ ಕಾರಣಗಳು<br>*ಆರ್ಥಿಕ ಕಾರಣಗಳು<br>*ಆರೋಗ್ಯ ಮತ್ತು ಪೌಷ್ಠಿಕಾಂಶ ಸಂಬಂಧಿತ ಕಾರಣಗಳು.<br>* ಅನುವಂಶೀಯತೆ. |
| ಇ) | ಅಸಹಜ ಬೆಳವಣಿಗೆ (ಕುಬ್ಜತೆ)ಯನ್ನು ತಡೆಗಟ್ಟಲು ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿಯಲ್ಲಿ ಕೈಗೊಂಡಿರುವ ಕ್ರಮವೇನು ಹಾಗೂ ಅದಕ್ಕೆ ಮೀಸಲಿಟ್ಟಿರುವ ಅನುದಾನ ಎಷ್ಟು; (ಕಳೆದ ಮೂರು ವರ್ಷದ ಜಿಲ್ಲಾವಾರು ಮಾಹಿತಿ ನೀಡುವುದು) | ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾಗುವ 0-6 ವರ್ಷದ ಮಕ್ಕಳಲ್ಲಿನ ಕುಬ್ಜತೆ ಹಾಗೂ ಅಪೌಷ್ಠಿಕತೆ ತಡೆಗಟ್ಟಲು ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿಯಲ್ಲಿ ಕೈಗೊಂಡಿರುವ ಕ್ರಮಗಳ ವಿವರವನ್ನು **ಅನುಬಂಧ-02**ರಲ್ಲಿ ಒದಗಿಸಿದೆ. ಕುಬ್ಜತೆಯುಳ್ಳ ಮಕ್ಕಳಿಗೆ ಪ್ರತ್ಯೇಕವಾಗಿ ಯಾವುದೇ ಅನುದಾನ ಮೀಸಲಿಟ್ಟಿರುವುದಿಲ್ಲ. |
| ಈ) | 0-3 ವರ್ಷದ ಮಕ್ಕಳಿಗೆ ಸರ್ಕಾರವು ಅಂಗನವಾಡಿ ಕೇಂದ್ರಗಳ ಮೂಲಕ ಮನೆಗಳಿಗೆ ನೇರವಾಗಿ ಯಾವ ಯಾವ ಪೌಷ್ಠಿಕ ಆಹಾರಗಳನ್ನು ಎಷ್ಟು ಪ್ರಮಾಣದಲ್ಲಿ ನೀಡಲಾಗುತ್ತದೆ; (ಒಂದು ತಿಂಗಳಿಗೆ ನೀಡುವ ಪೌಷ್ಠಿಕ ಆಹಾರದ ಮಾಹಿತಿ ನೀಡುವುದು) | ಅಂಗವಾಡಿ ಕೇಂದ್ರಗಳಲ್ಲಿ ದಾಖಲಾದ 06 ತಿಂಗಳಿಂದ – 06 ವರ್ಷದ ಮಕ್ಕಳಿಗೆ ಸರ್ಕಾರವು ಒದಗಿಸಲಾಗುತ್ತಿರುವ ಪೌಷ್ಠಿಕ ಆಹಾರದ ವಿವರವನ್ನು **ಅನುಬಂಧ-3**ರಲ್ಲಿ ಒದಗಿಸಿದೆ. |
| ಉ) | 3-6 ವರ್ಷದೊಳಗಿನ ಮಕ್ಕಳಿಗೆ ಸರ್ಕಾರವು ಅಂಗನವಾಡಿ ಕೇಂದ್ರದಲ್ಲಿ ನೀಡುವ ಪೌಷ್ಠಿಕ ಆಹಾರದ ಪ್ರಮಾಣ ಎಷ್ಟು? (ವಿವರ ನೀಡುವುದು | |

**ಸಂಖ್ಯೆ: ಮಮಇ 112 ಐಸಿಡಿ 2026**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು.

ಅನುಬಂಧ - 01

| (0 To 6 Years) Growth-Monitoring (FEBRUARY-2026) | | | | | | | | |
|---|---|---|---|---|---|---|---|---|
| Sl no | District | Total Active Children | Total Active Children measured | % | Severely stunted (N) | % | Moderately stunted (N) | % |
| 1 | Bagalkot | 131515 | 130818 | 99.47 | 20111 | 15.37 | 26214 | 20.04 |
| 2 | Bangalore Rural | 48311 | 48246 | 99.87 | 2857 | 5.92 | 5931 | 12.29 |
| 3 | Belagavi | 337008 | 336780 | 99.93 | 41690 | 12.38 | 62319 | 18.50 |
| 4 | Bellary | 98538 | 97772 | 99.22 | 15017 | 15.36 | 21182 | 21.66 |
| 5 | Bengaluru Urban | 190385 | 190266 | 99.94 | 19075 | 10.03 | 24931 | 13.10 |
| 6 | Bidar | 113813 | 112914 | 99.21 | 25325 | 22.43 | 23581 | 20.88 |
| 7 | Chamarajanagar | 39304 | 39241 | 99.84 | 7323 | 18.66 | 6321 | 16.11 |
| 8 | Chikballapur | 60365 | 60228 | 99.77 | 5384 | 8.94 | 8157 | 13.54 |
| 9 | Chikkamagaluru | 47060 | 47029 | 99.93 | 1668 | 3.55 | 4477 | 9.52 |
| 10 | Chitradurga | 109628 | 109493 | 99.88 | 8530 | 7.79 | 18980 | 17.33 |
| 11 | Dakshina Kannada | 100331 | 100167 | 99.84 | 2871 | 2.87 | 9493 | 9.48 |
| 12 | Davanagere | 99278 | 99156 | 99.88 | 8099 | 8.17 | 12672 | 12.78 |
| 13 | Dharwad | 104285 | 104005 | 99.73 | 11693 | 11.24 | 23044 | 22.16 |
| 14 | Gadag | 74269 | 74009 | 99.65 | 6321 | 8.54 | 13041 | 17.62 |
| 15 | Hassan | 65558 | 65542 | 99.98 | 1445 | 2.20 | 3070 | 4.68 |
| 16 | Haveri | 108512 | 108387 | 99.88 | 6682 | 6.16 | 19850 | 18.31 |
| 17 | Kalaburagi | 196311 | 194120 | 98.88 | 44518 | 22.93 | 33682 | 17.35 |
| 18 | Kodagu | 21316 | 21285 | 99.85 | 1844 | 8.66 | 3218 | 15.12 |
| 19 | Kolar | 82168 | 81776 | 99.52 | 4056 | 4.96 | 6678 | 8.17 |
| 20 | Koppal | 124951 | 124844 | 99.91 | 19903 | 15.94 | 30312 | 24.28 |
| 21 | Mandya | 66431 | 66208 | 99.66 | 4214 | 6.36 | 8007 | 12.09 |
| 22 | Mysuru | 115105 | 114816 | 99.75 | 4072 | 3.55 | 10148 | 8.84 |
| 23 | Raichur | 158331 | 157691 | 99.60 | 39947 | 25.33 | 44300 | 28.09 |
| 24 | Ramanagara | 44705 | 44664 | 99.91 | 2769 | 6.20 | 5502 | 12.32 |
| 25 | Shivamogga | 85761 | 85670 | 99.89 | 9397 | 10.97 | 12892 | 15.05 |
| 26 | Tumakuru | 128415 | 128185 | 99.82 | 17926 | 13.98 | 23194 | 18.09 |
| 27 | Udupi | 43389 | 43285 | 99.76 | 1528 | 3.53 | 3658 | 8.45 |
| 28 | Uttara Kannada | 73659 | 73593 | 99.91 | 5812 | 7.90 | 12742 | 17.31 |
| 29 | Vijayanagara | 103341 | 102558 | 99.24 | 12963 | 12.64 | 19759 | 19.27 |
| 30 | Vijayapura | 193065 | 191087 | 98.98 | 45660 | 23.89 | 31792 | 16.64 |
| 31 | Yadgir | 110721 | 109725 | 99.10 | 27127 | 24.72 | 23459 | 21.38 |
| Total | | **3275829** | **3263560** | **99.63** | **425827** | **13.05** | **552606** | **16.93** |

| | | |
|---|---|---|
| ಈ) | 0-3 ವರ್ಷದ ಮಕ್ಕಳಿಗೆ ಸರ್ಕಾರವು ಅಂಗನವಾಡಿ ಕೇಂದ್ರಗಳ ಮೂಲಕ ಮನೆಗಳಿಗೆ ನೇರವಾಗಿ ಯಾವ ಯಾವ ಪೌಷ್ಟಿಕ ಆಹಾರಗಳನ್ನು ಎಷ್ಟು ಪ್ರಮಾಣದಲ್ಲಿ ನೀಡಲಾಗುತ್ತದೆ; (ಒಂದು ತಿಂಗಳಿಗೆ ನೀಡುವ ಪೌಷ್ಟಿಕ ಆಹಾರದ ಮಾಹಿತಿ ನೀಡುವುದು) | ಅಂಗವಾಡಿ ಕೇಂದ್ರಗಳಲ್ಲಿ ದಾಖಲಾದ 06 ತಿಂಗಳಿಂದ – 06 ವರ್ಷದ ಮಕ್ಕಳಿಗೆ ಸರ್ಕಾರವು ಒದಗಿಸಲಾಗುತ್ತಿರುವ ಪೌಷ್ಟಿಕ ಆಹಾರದ ವಿವರವನ್ನು **ಅನುಬಂಧ-3** ರಲ್ಲಿ ಒದಗಿಸಿದೆ. |
| ಉ) | 3-6 ವರ್ಷದೊಳಗಿನ ಮಕ್ಕಳಿಗೆ ಸರ್ಕಾರವು ಅಂಗನವಾಡಿ ಕೇಂದ್ರದಲ್ಲಿ ನೀಡುವ ಪೌಷ್ಟಿಕ ಆಹಾರದ ಪ್ರಮಾಣ ಎಷ್ಟು? (ವಿವರ ನೀಡುವುದು) | |

13/3/17

ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು.

ಅನುಬಂಧ - 01

# (0 To 6 Years) Growth-Monitoring (FEBRUARY-2026)

| Sl no | District | Total Active Children | Total Active Children measured | % | Severely stunted (N) | % | Moderately stunted (N) | % |
|---|---|---|---|---|---|---|---|---|
| 1 | Bagalkot | 131515 | 130818 | 99.47 | 20111 | 15.37 | 26214 | 20.04 |
| 2 | Bangalore Rural | 48311 | 48246 | 99.87 | 2857 | 5.92 | 5931 | 12.29 |
| 3 | Belagavi | 337008 | 336780 | 99.93 | 41690 | 12.38 | 62319 | 18.50 |
| 4 | Bellary | 98538 | 97772 | 99.22 | 15017 | 15.36 | 21182 | 21.66 |
| 5 | Bengaluru Urban | 190385 | 190266 | 99.94 | 19075 | 10.03 | 24931 | 13.10 |
| 6 | Bidar | 113813 | 112914 | 99.21 | 25325 | 22.43 | 23581 | 20.88 |
| 7 | Chamarajanagar | 39304 | 39241 | 99.84 | 7323 | 18.66 | 6321 | 16.11 |
| 8 | Chikballapur | 60365 | 60228 | 99.77 | 5384 | 8.94 | 8157 | 13.54 |
| 9 | Chikkamagaluru | 47060 | 47029 | 99.93 | 1668 | 3.55 | 4477 | 9.52 |
| 10 | Chitradurga | 109628 | 109493 | 99.88 | 8530 | 7.79 | 18980 | 17.33 |
| 11 | Dakshina Kannada | 100331 | 100167 | 99.84 | 2871 | 2.87 | 9493 | 9.48 |
| 12 | Davanagere | 99278 | 99156 | 99.88 | 8099 | 8.17 | 12672 | 12.78 |
| 13 | Dharwad | 104285 | 104005 | 99.73 | 11693 | 11.24 | 23044 | 22.16 |
| 14 | Gadag | 74269 | 74009 | 99.65 | 6321 | 8.54 | 13041 | 17.62 |
| 15 | Hassan | 65558 | 65542 | 99.98 | 1445 | 2.20 | 3070 | 4.68 |
| 16 | Haveri | 108512 | 108387 | 99.88 | 6682 | 6.16 | 19850 | 18.31 |
| 17 | Kalaburagi | 196311 | 194120 | 98.88 | 44518 | 22.93 | 33682 | 17.35 |
| 18 | Kodagu | 21316 | 21285 | 99.85 | 1844 | 8.66 | 3218 | 15.12 |
| 19 | Kolar | 82168 | 81776 | 99.52 | 4056 | 4.96 | 6678 | 8.17 |
| 20 | Koppal | 124951 | 124844 | 99.91 | 19903 | 15.94 | 30312 | 24.28 |
| 21 | Mandya | 66431 | 66208 | 99.66 | 4214 | 6.36 | 8007 | 12.09 |
| 22 | Mysuru | 115105 | 114816 | 99.75 | 4072 | 3.55 | 10148 | 8.84 |
| 23 | Raichur | 158331 | 157691 | 99.60 | 39947 | 25.33 | 44300 | 28.09 |
| 24 | Ramanagara | 44705 | 44664 | 99.91 | 2769 | 6.20 | 5502 | 12.32 |
| 25 | Shivamogga | 85761 | 85670 | 99.89 | 9397 | 10.97 | 12892 | 15.05 |
| 26 | Tumakuru | 128415 | 128185 | 99.82 | 17926 | 13.98 | 23194 | 18.09 |
| 27 | Udupi | 43389 | 43285 | 99.76 | 1528 | 3.53 | 3658 | 8.45 |
| 28 | Uttara Kannada | 73659 | 73593 | 99.91 | 5812 | 7.90 | 12742 | 17.31 |
| 29 | Vijayanagara | 103341 | 102558 | 99.24 | 12963 | 12.64 | 19759 | 19.27 |
| 30 | Vijayapura | 193065 | 191087 | 98.98 | 45660 | 23.89 | 31792 | 16.64 |
| 31 | Yadgir | 110721 | 109725 | 99.10 | 27127 | 24.72 | 23459 | 21.38 |
| Total | | 3275829 | 3263560 | 99.63 | 425827 | 13.05 | 552606 | 16.93 |

## ಅನುಬಂಧ-2

## ಮಕ್ಕಳಲ್ಲಿನ ಕುಬ್ಜತೆ ಮತ್ತು ಅಪೌಷ್ಠಿಕತೆ ನಿವಾರಣೆಗೆ ಸರ್ಕಾರದ ವತಿಯಿಂದ ಕೈಗೊಂಡ ಕ್ರಮಗಳು :

### 1. ಪೂರಕ ಪೌಷ್ಠಿಕ ಆಹಾರ:

**(ಎ) ಮಾತೃಪೂರ್ಣ ಯೋಜನೆ:** ಮಾತೃಪೂರ್ಣ ಯೋಜನೆಯನ್ನು 2017 ಅಕ್ಟೋಬರ್ 2ನೇ ತಾರೀಖಿನಿಂದ ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಪೌಷ್ಠಿಕಾಂಶಯುಕ್ತ ಮಧ್ಯಾಹ್ನದ ಬಿಸಿಯೂಟವನ್ನು ಅಂಗನವಾಡಿ ಕೇಂದ್ರದಲ್ಲಿಯೇ ನೀಡಲಾಗುತ್ತದೆ.

ಕೇಂದ್ರ ಸರ್ಕಾರದ ರೂ.4.75 ರ ಅನುದಾನದೊಂದಿಗೆ ರೂ.16.25 ರ ರಾಜ್ಯ ಸರ್ಕಾರದ ಹೆಚ್ಚುವರಿ ಅನುದಾನ ಸೇರಿ ಒಟ್ಟು ರೂ. 21.00ರ ಘಟಕ ವೆಚ್ಚದಲ್ಲಿ ಗರ್ಭಿಣಿ, ಬಾಣಂತಿಯರಲ್ಲಿ ಅಪೌಷ್ಠಿಕತೆ ಮತ್ತು ರಕ್ತಹೀನತೆ ತಡೆಯಲು ಅನುವಾಗುವಂತೆ ಬಿಸಿಯೂಟವನ್ನು ಸಿದ್ಧಪಡಿಸಿ ಅಂಗನವಾಡಿ ಕೇಂದ್ರದಲ್ಲಿಯೇ ವಿತರಣೆ ಮಾಡಲಾಗುತ್ತಿದೆ.

ಮುಂದುವರೆದು, ಪ್ರಸಕ್ತ ಸಾಲಿನಲ್ಲಿ ಫಲಾನುಭವಿಗಳ ಇಚ್ಛೆಗನುಸಾರವಾಗಿ ಅಗತ್ಯವಿರುವಕಚ್ಚಾಆಹಾರಸಾಮಗ್ರಿಗಳನ್ನುಮನೆಗೆ (THR) ವಿತರಿಸಲಾಗುತ್ತಿದೆ ಹಾಗೂ ಅಂಗನವಾಡಿ ಕೇಂದ್ರದಲ್ಲಿಯೇ ಪೌಷ್ಠಿಕಯುಕ್ತ ಬಿಸಿಯೂಟವನ್ನು ಸ್ವೀಕರಿಸಬಹುದಾಗಿದೆ.

**(ಬಿ) ಮಕ್ಕಳಿಗೆ ಪೂರಕ ಪೌಷ್ಠಿಕ ಆಹಾರ:** ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾದ 6 ತಿಂಗಳಿಂದ 6 ವರ್ಷದ ಮಕ್ಕಳಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ 300 ದಿನಗಳ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ.

- ಎಲ್ಲಾ ಮಕ್ಕಳಿಗೆ ಅಂಗನವಾಡಿ ಕೇಂದ್ರದಲ್ಲಿ ಪ್ರತಿದಿನ ರೂ.**8.00** ಮೌಲ್ಯದ **ಪೂರಕ ಪೌಷ್ಠಿಕ ಆಹಾರ**ವನ್ನು ನೀಡಲಾಗುತ್ತಿದೆ.
- **ತೀವ್ರ ಅಪೌಷ್ಠಿಕ** ಮಕ್ಕಳಿಗೆ ಪ್ರತಿ ದಿನ ರೂ.12.00 ಮೌಲ್ಯದ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ.
- ಅಂಗನವಾಡಿಗೆ ಹಾಜರಾಗುವ 03 **ವರ್ಷದಿಂದ 06** ವರ್ಷದ ಎಲ್ಲಾ ಮಕ್ಕಳಿಗೆ ವಾರದಲ್ಲಿ **2 ದಿನ ಮೊಟ್ಟೆಯನ್ನು** ನೀಡಲಾಗುತ್ತಿದೆ.
- ರಾಜ್ಯ ಸರ್ಕಾರದ ಕ್ಷೀರಭಾಗ್ಯ ಯೋಜನೆಯಡಿ 06 ತಿಂಗಳಿಂದ 06 ವರ್ಷದ ಎಲ್ಲಾ ಅಂಗನವಾಡಿ ಮಕ್ಕಳಿಗೆ ವಾರದಲ್ಲಿ 5 ದಿನ 150 ಮಿ.ಲಿ ಹಾಲನ್ನು (15ಗ್ರಾಂ ಕೆನೆಭರಿತ ಹಾಲಿನಪುಡಿ, 5 ಗ್ರಾಂ ಸಕ್ಕರೆ) ನೀಡಲಾಗುತ್ತಿದೆ.
- 6 ತಿಂಗಳಿಂದ 3 ವರ್ಷದ ತೀವ್ರ / ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 3 ದಿನ ಮೊಟ್ಟೆ ಹಾಗೂ 3 ದಿನ 20 ಗ್ರಾಂ. ಹಾಲಿನ ಪುಡಿಯನ್ನು ಮನೆಗೆ ವಿತರಿಸಲಾಗುತ್ತಿದೆ.
- 3 ವರ್ಷದಿಂದ 6 ವರ್ಷದ ತೀವ್ರ / ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 5 ದಿನ ಮೊಟ್ಟೆ ಹಾಗೂ 3 ದಿನ 20 ಗ್ರಾಂ. ಹಾಲಿನ ಪುಡಿಯನ್ನು ಮನೆಗೆ ವಿತರಿಸಲಾಗುತ್ತಿದೆ.
- ತೀವ್ರ ಅಪೌಷ್ಠಿಕ ಮಕ್ಕಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪೌಷ್ಠಿಕ ಪುನರ್ವಸತಿ ಕೇಂದ್ರ (NRC) ಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.
- ಆರೋಗ್ಯ ಮತ್ತು ಪೌಷ್ಠಿಕ ಶಿಬಿರಗಳನ್ನು ಏರ್ಪಡಿಸಿ ಅಧಿಕ ಪೌಷ್ಠಿಕತೆಯುಳ್ಳ ಆಹಾರಗಳನ್ನು ತಯಾರಿಸುವ ಕುರಿತು ಮತ್ತು ಮಕ್ಕಳಿಗೆ ಪೌಷ್ಠಿಕತೆಯುಳ್ಳ ಆಹಾರವನ್ನು ನೀಡಲು ಅರಿವು ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ ಹಾಗೂ ಪೋಷಣ್ ಮಾಸಾಚರಣೆ ಕಾರ್ಯಕ್ರಮದಲ್ಲಿಯೂ ಸಹ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ವಿಶೇಷ ಪೌಷ್ಠಿಕ ಶಿಬಿರಗಳನ್ನು ಆಯೋಜಿಸಲಾಗುತ್ತಿರುತ್ತದೆ.

**2. ಜಂತು ಹುಳು ಮದ್ದು ಕಾರ್ಯಕ್ರಮ: /**

6 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಮತ್ತು ಗರ್ಭಿಣಿಯರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ನಿಗದಿತ ಜಂತು ಹುಳು ಮದ್ದನ್ನು ನೀಡಲಾಗುತ್ತಿದೆ.

**3. ಆರೋಗ್ಯ ತಪಾಸಣೆ:**

ಅಂಗನವಾಡಿ ಕೇಂದ್ರದಲ್ಲಿ ದಾಖಲಾಗಿರುವ ಎಲ್ಲಾ ಮಕ್ಕಳ ಆರೋಗ್ಯ ತಪಾಸಣೆಯನ್ನು ನಿಯಮಿತವಾಗಿ 3 ತಿಂಗಳಿಗೊಮ್ಮೆ (RBSK ಮತ್ತು ವೈದ್ಯಕೀಯ ಅಧಿಕಾರಿಗಳಿಂದ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ನಡೆಸಲಾಗುತ್ತಿದೆ.

**4.ಚಿಗುರು ಕಾರ್ಯಕ್ರಮ**:

ಇದಲ್ಲದೆ, ಅಪೌಷ್ಟಿಕತೆಯನ್ನು ನಿವಾರಿಸಲು ಸಮುದಾಯ ಆಧಾರಿತತೀವ್ರ ಅಪೌಷ್ಟಿಕ ಮಕ್ಕಳ ನಿರ್ವಹಣೆ (C-MAM) ಕಾರ್ಯಕ್ರಮ "ಚಿಗುರು" ಎಂಬ ವಿನೂತನ ಯೋಜನೆಯನ್ನು ಪ್ರಸ್ತುತ ಬಳ್ಳಾರಿ, ಬೀದರ, ಕಲಬುರಗಿ, ಯಾದಗಿರಿ, ಬೆಳಗಾವಿ, ರಾಯಚೂರು, ಚಿತ್ರದುರ್ಗ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.

ಸದರಿ ಯೋಜನೆಯು ಆರಂಭಿಕ ಹಂತಗಳಲ್ಲಿ ತೀವ್ರ ಅಪೌಷ್ಟಿಕತೆಯನ್ನು ಗುರುತಿಸಿ, ವೈದ್ಯಕೀಯ ಸಮಸ್ಯೆಗಳಿಲ್ಲದ ತೀವ್ರ ಮತ್ತು ಸಾಧಾರಣ ಅಪೌಷ್ಟಿಕ ಮಕ್ಕಳಿಗೆ ವೈದ್ಯಕೀಯ ಪೋಷಕಾಂಶಗಳು ಹಾಗೂ ಹೆಚ್ಚು ಪೋಷಕಾಂಶಯುಕ್ತ ಪೌಷ್ಟಿಕ ಆಹಾರವನ್ನು ನೀಡುವುದರೊಂದಿಗೆ, ಮಕ್ಕಳ ಪೋಷಣೆಯು ತಾಯಿಯ ಜವಾಬ್ದಾರಿ ಮಾತ್ರವಲ್ಲದೇ ಇಡೀ ಕುಟುಂಬದ ಜವಾಬ್ದಾರಿ ಎಂಬ ಪರಿಕಲ್ಪನೆಯಡಿ ರೂಪಿಸಲಾಗಿರುತ್ತದೆ.

**4.ಮಾಹಿತಿ ಸೇವೆ:**

ಅಂಗನವಾಡಿ ಕೇಂದ್ರಗಳಿಗೆ ವೈದ್ಯಾಧಿಕಾರಿಗಳು ಭೇಟಿ ನೀಡಿ ಮಕ್ಕಳ ಆರೋಗ್ಯ ತಪಾಸಣೆ ಮಾಡಿದಾಗ ಹೆಚ್ಚಿನ ತಪಾಸಣೆಗೆ ಅಥವಾ ಚಿಕಿತ್ಸೆಗೆ ತಾಲ್ಲೂಕು ಆರೋಗ್ಯ ಕೇಂದ್ರ / ಜಿಲ್ಲಾ ಆರೋಗ್ಯ ಕೇಂದ್ರಕ್ಕೆ / ಪೌಷ್ಟಿಕ ಪುನರ್ವಸತಿ ಕೇಂದ್ರಗಳಿಗೆ ಕಳುಹಿಸಲು ಸೂಚಿಸುತ್ತಾರೆ. ವೈದ್ಯರು ಸೂಚಿಸಿದಂತೆ ಅಂಗನವಾಡಿ ಕಾರ್ಯಕರ್ತೆಯರು ಹೆಚ್ಚಿನ ಚಿಕಿತ್ಸೆ, ತಪಾಸಣೆಗೆ ಮಕ್ಕಳನ್ನು ಕಳುಹಿಸಿಕೊಡುತ್ತಾರೆ.

ಅನುಬಂಧ-3

| ಅಂಗನವಾಡಿ ಕೇಂದ್ರಗಳಲ್ಲಿ ಒದಗಿಸುತ್ತಿರುವ ಪೂರಕ ಪೌಷ್ಟಿಕ ಆಹಾರದ ವಿವರ | | | | |
|---|---|---|---|---|
| ಕ್ರ. ಸಂ | ಫಲಾನುಭವಿಗಳ ವರ್ಗ | ವಿವರ | ಅಂಗನವಾಡಿ ಕೇಂದ್ರಗಳಲ್ಲಿ ಒದಗಿಸುತ್ತಿರುವ ಪೂರಕ ಪೌಷ್ಟಿಕ ಆಹಾರ | ಪ್ರಮಾಣ ಮತ್ತು ವಿತರಣ ದಿನಗಳು |
| 1 | 06 ತಿಂಗಳಿಂದ 03 ವರ್ಷದ ಮಕ್ಕಳು | ಸಾಮಾನ್ಯ ಮಕ್ಕಳು | ಪುಷ್ಟಿ, ಬೆಲ್ಲ (Take Home Ration) | 120 ಗ್ರಾಂ, 31 ಗ್ರಾಂ 25 ದಿನಗಳು |
| | | | ಹಾಲಿನ ಪುಡಿ, ಸಕ್ಕರೆ (Take Home Ration) | 15 ಗ್ರಾಂ, 05 ಗ್ರಾಂ 25 ದಿನಗಳು |
| | | ತೀವ್ರ ಅಪೌಷ್ಟಿಕ ಮಕ್ಕಳು | ಪುಷ್ಟಿ, ಬೆಲ್ಲ (Take Home Ration) | 200 ಗ್ರಾಂ, 50 ಗ್ರಾಂ 25 ದಿನಗಳು |
| | | | ಹಾಲಿನ ಪುಡಿ, ಸಕ್ಕರೆ (Take Home Ration) | ಸಾಮನ್ಯ ಮಕ್ಕಳಿನಂತೆ ವಾರದಲ್ಲಿ 05 ದಿನ 15 ಗ್ರಾಂ ಹಾಲಿನಪುಡಿಯೊಂದಿಗೆ ಹೆಚ್ಚುವರಿಯಾಗಿ ವಾರದಲ್ಲಿ 03 ದಿನ ದಿನಕ್ಕೆ 20 ಗ್ರಾಂ ಹಾಲಿನ ಪುಡಿ 05 ಗ್ರಾಂ ಸಕ್ಕರೆ ಮನೆಗೆ ವಿತರಿಸಲಾಗುತ್ತಿದೆ. |
| | | | ಮೊಟ್ಟೆ | ವಾರದಲ್ಲಿ 03 ದಿನಗಳು |
| | | ಸಾಧಾರಣ ಅಪೌಷ್ಟಿಕ ಮಕ್ಕಳು | ಪುಷ್ಟಿ, ಬೆಲ್ಲ (Take Home Ration) | 120 ಗ್ರಾಂ, 31 ಗ್ರಾಂ 25 ದಿನಗಳು |
| | | | ಹಾಲಿನ ಪುಡಿ, ಸಕ್ಕರೆ (Take Home Ration) | ಸಾಮನ್ಯ ಮಕ್ಕಳಿನಂತೆ ವಾರದಲ್ಲಿ 05 ದಿನ 15 ಗ್ರಾಂ ಹಾಲಿನಪುಡಿಯೊಂದಿಗೆ ಹೆಚ್ಚುವರಿಯಾಗಿ ವಾರದಲ್ಲಿ 03 ದಿನ ದಿನಕ್ಕೆ 20 ಗ್ರಾಂ ಹಾಲಿನ ಪುಡಿ 05 ಗ್ರಾಂ ಸಕ್ಕರೆ ಮನೆಗೆ ವಿತರಿಸಲಾಗುತ್ತಿದೆ. |
| | | | ಮೊಟ್ಟೆ | ವಾರದಲ್ಲಿ 03 ದಿನಗಳು |
| 2 | 03 ವರ್ಷದಿಂದ 06 ವರ್ಷದ ಮಕ್ಕಳು | ಸಾಮಾನ್ಯ ಮಕ್ಕಳು | ಮಿಲೆಟ್ ಲಾಡು (ಬೆಳಗಿನ ಉಪಹಾರ) | 40 ಗ್ರಾಂ, 25 ದಿನಗಳು |
| | | | ರವಾ ಉಪ್ಪಿಟ್ಟು (ಮಧ್ಯಾಹ್ನದ ಬಿಸಿಯೂಟ) | 90 ಗ್ರಾಂ, 09 ದಿನಗಳು |
| | | | ರವಾ ಪಾಯಸ (ಮಧ್ಯಾಹ್ನದ ಬಿಸಿಯೂಟ) | 90 ಗ್ರಾಂ, 04 ದಿನಗಳು |
| | | | ಅನ್ನ ಸಾಂಬಾರ್ (ಮಧ್ಯಾಹ್ನದ ಬಿಸಿಯೂಟ) | 90 ಗ್ರಾಂ, 12 ದಿನಗಳು |
| | | | ಹಾಲು, ಸಕ್ಕರೆ | 150 ಮಿ.ಲಿ. 05 ಗ್ರಾಂ 25 ದಿನಗಳು |
| | | | ಮೊಟ್ಟೆ | ವಾರದಲ್ಲಿ 02 ದಿನ |
| | | ತೀವ್ರ ಅಪೌಷ್ಟಿಕ ಮಕ್ಕಳು | ಮಿಲೆಟ್ ಲಾಡು (ಬೆಳಗಿನ ಉಪಹಾರ) | 40 ಗ್ರಾಂ, 25 ದಿನಗಳು |
| | | | ರವಾ ಉಪ್ಪಿಟ್ಟು (ಮಧ್ಯಾಹ್ನದ ಬಿಸಿಯೂಟ) | 90 ಗ್ರಾಂ, 09 ದಿನಗಳು |
| | | | ರವಾ ಪಾಯಸ (ಮಧ್ಯಾಹ್ನದ ಬಿಸಿಯೂಟ) | 90 ಗ್ರಾಂ, 04 ದಿನಗಳು |
| | | | ಅನ್ನ ಸಾಂಬಾರ್ (ಮಧ್ಯಾಹ್ನದ ಬಿಸಿಯೂಟ) | 90 ಗ್ರಾಂ, 12 ದಿನಗಳು |
| | | | ಹಾಲು, ಸಕ್ಕರೆ | ಸಾಮನ್ಯ ಮಕ್ಕಳಿನಂತೆ ವಾರದಲ್ಲಿ 05 ದಿನ 15 ಗ್ರಾಂ ಹಾಲಿನಪುಡಿಯೊಂದಿಗೆ ಹೆಚ್ಚುವರಿಯಾಗಿ ವಾರದಲ್ಲಿ 03 ದಿನ ದಿನಕ್ಕೆ 20 ಗ್ರಾಂ ಹಾಲಿನ ಪುಡಿ 05 ಗ್ರಾಂ ಸಕ್ಕರೆ ಮನೆಗೆ ವಿತರಿಸಲಾಗುತ್ತಿದೆ. |
| | | | ಮೊಟ್ಟೆ | ವಾರದಲ್ಲಿ 05 ದಿನ |
| | | | ಪುಷ್ಟಿ, ಬೆಲ್ಲ (Take Home Ration) | 80 ಗ್ರಾಂ, 20 ಗ್ರಾಂ 25 ದಿನಗಳು |
| | | ಸಾಧಾರಣ ಅಪೌಷ್ಟಿಕ ಮಕ್ಕಳು | ಮಿಲೆಟ್ ಲಾಡು (ಬೆಳಗಿನ ಉಪಹಾರ) | 25 ಗ್ರಾಂ, 25 ದಿನಗಳು |
| | | | ರವಾ ಉಪ್ಪಿಟ್ಟು (ಮಧ್ಯಾಹ್ನದ ಬಿಸಿಯೂಟ) | 110 ಗ್ರಾಂ, 09 ದಿನಗಳು |
| | | | ರವಾ ಪಾಯಸ (ಮಧ್ಯಾಹ್ನದ ಬಿಸಿಯೂಟ) | 110 ಗ್ರಾಂ, 04 ದಿನಗಳು |
| | | | ಅನ್ನ ಸಾಂಬಾರ್ (ಮಧ್ಯಾಹ್ನದ ಬಿಸಿಯೂಟ) | 110 ಗ್ರಾಂ, 12 ದಿನಗಳು |
| | | | ಹಾಲು, ಸಕ್ಕರೆ | ಸಾಮನ್ಯ ಮಕ್ಕಳಿನಂತೆ ವಾರದಲ್ಲಿ 05 ದಿನ 15 ಗ್ರಾಂ ಹಾಲಿನಪುಡಿಯೊಂದಿಗೆ ಹೆಚ್ಚುವರಿಯಾಗಿ ವಾರದಲ್ಲಿ 03 ದಿನ ದಿನಕ್ಕೆ 20 ಗ್ರಾಂ ಹಾಲಿನ ಪುಡಿ 05 ಗ್ರಾಂ ಸಕ್ಕರೆ ಮನೆಗೆ ವಿತರಿಸಲಾಗುತ್ತಿದೆ. |
| | | | ಮೊಟ್ಟೆ | ವಾರದಲ್ಲಿ 05 ದಿನ |